O.S.No.308/2013
PW -2

ದಿನಾಂಕ 24/05/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಪಾಟೀ ಸವಾಲು :- ಶ್ರೀ ಡಿ.ವಿ.ಎಸ್ ಪ್ರತಿವಾದಿ 1 ಮತ್ತು 11 ರವರ ಪರ ವಕೀಲರಿಂದ**

ವಾದಿ ಈ ದಾವೆಯನ್ನು ಜಮೀನಿಗೊಸ್ಕರ ಹಾಕಿರುತ್ತಾರೆ. ದಾವಾ ಆಸ್ತಿ ನಿವೇಶಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ನಿವೇಶನಗಳಾಗಿ ಸುಮಾರು 15-20 ಜನಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಹಣಿ ಲಕ್ಷ್ಮಣ ರವರ ಹೆಸರಿಗೆ 2 ಎಕರೆಗೆ ಬರುತ್ತಿದೆ. ದಾವಾ ಆಸ್ತಿಯ ಅಕ್ಕ ಪಕ್ಕ ನನಗೆ ಸೇರಿದ ಸರ್ವೆ ನಂ- 3/3, ವಿಸ್ತಿರ್ಣ 3 ಎಕರೆ 15 ಗುಂಟೆ ಇರುತ್ತದೆ. ದಾವಾ ಆಸ್ತಿ ಮೊದಲಿಗೆ ರಾಮಕ್ಕ ಇವರಿಗೆ ಸೇರಿತ್ತು. ರಾಮಕ್ಕ ರವರ ಪೂರ್ವದಲ್ಲಿ ತಿಮ್ಮಯ್ಯ ರವರಿಗೆ ಸೇರಿತ್ತು ಅವರ ನಂತರ ಪರಸನಭೋವಿಗೆ ರವರಿಗೆ ಸೇರಿತ್ತು. ಪರಸನ ಭೋವಿ ದಾವಾ ಆಸ್ತಿಯನ್ನು ಯಾವ ವರ್ಷದಲ್ಲಿ ಖರೀದಿ ಮಾಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಪರಸನಭೋವಿಗೆ ಮಕ್ಕಳು ಇರುವುದಿಲ್ಲ. ಪರಸನಭೋವಿಗೆ ಅಣ್ಣ ತಮ್ಮಂದಿರು ಇರುವುದಿಲ್ಲ, ಅಕ್ಕ ರಾಮಕ್ಕ ಒಬ್ಬರೇ ಇರುತ್ತಾರೆ.

ರಾಮಕ್ಕನಿಗೆ ದಾವಾ ಆಸ್ತಿ ಪರಸನಭೇೂವಿ ಬರೆದುಕೊಟ್ಟಿದ್ದು ಆದರೆ ಯಾವ ದಾಖಲೆ ಎಂದು ಹೇಳಲು ಆಗುವುದಿಲ್ಲ. ರಾಮಕ್ಕನ ಹೆಸರಿಗೆ ಇರುವ ಖಾತೆ ಪಹಣಿ ನೋಡಿರುತ್ತೇನೆ , ಆದರೆ ಯಾವ ವರ್ಷ ಎಂದು ನನಗೆ ಗೊತ್ತಿರುವುದಿಲ್ಲ, ರಾಮಕ್ಕನಿಗೆ ಒಂದು ಹೆಣ್ಣು ಮತ್ತು ಒಂದು ಗಂಡು ಇರುತ್ತಾರೆ. ರಾಮಕ್ಕ ಯಾವಾಗ ತೀರಿಕೊಂಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯ ಖಾತೆ ಪಹಣಿ ವಾದಿ ಹೆಸರಿಗೆ 20 ವರ್ಷಗಳಿಂದ ಬರುತ್ತಿದೆ. ದಾವಾ ಆಸ್ತಿ ಭೂ ಪರಿವರ್ತನೆ ಮಾಡಿ ರಾಮಕ್ಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ವಾದಿಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ , ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ